

ನಿಶ್ಶೇಷ ಎಂದರೆ ಬಾಕಿ ಏನೂ ಉಳಿದಿಲ್ಲ ಎಂದು ಅರ್ಥ. ಆಂಧ್ರ ಮೂಲದ, ಅಮೆರಿಕದಲ್ಲಿ ಹುಟ್ಟಿರುವ ನಿಶೇಷ್ ಬಸವರೆಡ್ಡಿ ಕೂಡ ಕನಸುಗಳನ್ನು ನನಸು ಮಾಡಿಕೊಂಡ ವಿಷಯದಲ್ಲಿ ಅನ್ವರ್ಥನಾಮಿ. ಈಡೇರಿಸಿಕೊಳ್ಳಲು ಬಾಕಿ ಕನಸುಗಳೇ ಇಲ್ಲವೇನೊ ಈ ಟೆನಿಸ್ ಆಟಗಾರನಿಗೆ. ಅವರು ಆಸ್ಟ್ರೇಲಿಯಾ ಓಪನ್‌ನಲ್ಲಿ ತನ್ನ ಆರಾಧ್ಯದೈವ ಜೊಕೊವಿಚ್ ಎದುರು ಒಂದು ಸೆಟ್ ಗೆದ್ದುಕೊಂಡಿದ್ದು ಸಾರ್ಥಕ್ಯದ ಸಂದರ್ಭ.

■ ವಿಶಾಖ ಎನ್.

# ಆರಾಧ್ಯದೈವದ ಎದುರು ಬಸವರೆಡ್ಡಿಯ ಬೆವರು

ಸರ್ಬಿಯಾದ ನೊವಾಕ್ ಜೊಕೊವಿಚ್ ಮೊದಲ ಗ್ರ್ಯಾನ್ ಸ್ಲ್ಯಾಮ್ ಟೆನಿಸ್ ಆಡಲು ಪದಾರ್ಪಣೆ ಮಾಡಿದ ಕೆಲವು ತಿಂಗಳ ನಂತರ ಹುಟ್ಟಿದವರು ನಿಶೇಷ್ ಬಸವರೆಡ್ಡಿ. ಇತ್ತೀಚೆಗೆ ಆಸ್ಟ್ರೇಲಿಯಾ ಓಪನ್ ಗ್ರ್ಯಾನ್ ಸ್ಲ್ಯಾಮ್‌ನಲ್ಲಿ ಅವರ ಪ್ರವೇಶವೂ ಆಯಿತೆನ್ನಿ. ಚೊಚ್ಚಲ ಗ್ರ್ಯಾನ್ ಸ್ಲ್ಯಾಮ್‌ನಲ್ಲಿಯೇ ಅವರು ಮೊದಲ ಸುತ್ತಿನಲ್ಲಿ ತಮ್ಮದೇ ಆರಾಧ್ಯದೈವ ಜೊಕೊವಿಚ್ ಅವರನ್ನು ಎದುರಿಸಬೇಕಾಗಿ ಬಂದಿತು. ಇದು ಒಬ್ಬೊಬ್ಬರ ದೃಷ್ಟಿಯಲ್ಲಿ ಒಂದೊಂದು ರೀತಿ ಕಾಣಬಹುದು. ಆದರೆ, ಬಸವರೆಡ್ಡಿ ಅವರ ದೇಹಭಾಷೆಯೇ ಆ ದಿನ ಎಲ್ಲವನ್ನೂ ಹೇಳುತ್ತಿತ್ತು.

ಮೊದಲ ಸೆಟ್‌ನಲ್ಲಿ ತನ್ನ ಆರಾಧ್ಯದೈವವೇ ತುಸು ತಡಬಡಾಯಿಸುವಂತೆ 19ರ ಹರೆಯದ ಹುಡುಗ ಮಾಡಿದ್ದು ನಿಜ; ಅಲ್ಲಲ್ಲ... ಆಡಿದ್ದು ನಿಜ. 6–4ರಲ್ಲಿ ಬಸವರೆಡ್ಡಿ ಆ ಸೆಟ್ ಗೆದ್ದ ಮೇಲೆ ಎರಡನೇ ಸೆಟ್‌ನಲ್ಲಿ ಹುರುಪು ಹೆಚ್ಚಾಯಿತು. ಆದರೆ, ಮೊದಲ ಸೆಟ್‌ನಲ್ಲಿ ಮಾಡಿದ್ದ ಎಷ್ಟೋ ತಪ್ಪುಗಳನ್ನು ಎರಡನೆಯದರಲ್ಲಿ ಜೊಕೊವಿಚ್ ನೋಡನೋಡುತ್ತಿದ್ದಂತೆ ಸರಿಪಡಿಸಿಕೊಂಡರು. ಆಮೇಲೆ ಹುಡುಗನ ದೇಹದಲ್ಲಿ ನೋವು ಕಾಣಿಸಿಕೊಂಡಿತು. ಕಾಲುಗಳ ಸ್ನಾಯುಗಳು ಹೇಳಿದ ಮಾತನ್ನು ಕೇಳಲಿಲ್ಲ. ಒಂದು ಹಂತದಲ್ಲಿ ಎರಡನೇ ಸೆಟ್‌ನಲ್ಲೂ ಸಮಬಲ ಸಾಧಿಸಿದ್ದ ಬಸವರೆಡ್ಡಿ, ಆಮೇಲೆ 3–6, 4–6, 2–6ರಲ್ಲಿ ಸತತವಾಗಿ ಸೆಟ್‌ಗಳನ್ನು ಸೋತರು. ಇದುವರೆಗೆ 24ರಲ್ಲಿ 10 ಆಸ್ಟ್ರೇಲಿಯಾ ಓಪನ್ ಗ್ರ್ಯಾನ್ ಸ್ಲ್ಯಾಮ್ ಗೆದ್ದಿರುವ ಜೊಕೊವಿಚ್ ಅನುಭವದ ಎದುರು ಹರೆಯದ ಹುಡುಗ ಮಂಡಿಯೂರದೆ ವಿಧಿಯಿರಲಿಲ್ಲ. ಈ ಸೋಲಿನಲ್ಲಿ ಅವರಿಗೆ ದೊಡ್ಡ ಸಾರ್ಥಕ್ಯವೊಂದು ಸಂದಿತು. ಅದುವೇ– ಆರಾಧ್ಯದೈವದಿಂದಲೇ ಮೆಚ್ಚುಗೆಯ ನುಡಿ ಕೇಳಲು ಸಾಧ್ಯವಾದುದು.

‘ಒಂದು ಪೂರ್ತಿ ಸೆಟ್‌ನಲ್ಲಿ ಅವನು ನನಗಿಂತ ಒಳ್ಳೆಯ ಆಟಗಾರನಾಗಿದ್ದ. ತನ್ನೆಲ್ಲ ಹೊಡೆತಗಳಿಂದ ನನಗೆ ಅಚ್ಚರಿ ಮೂಡಿಸಿದ. ಹೋರಾಟದ ಸ್ಫೂರ್ತಿ ಕಂಡು ನಾನು ಮೂಕವಿಸ್ಮಿತನಾದೆ. ಅವನಿಗೆ ಆಲ್ ದಿ ಬೆಸ್ಟ್ ಹೇಳುವೆ’ ಎಂದು ಜೊಕೊವಿಚ್ ಹೇಳಿದ್ದನ್ನು ಬಸವರೆಡ್ಡಿ ಎದೆಗೆ ಇಳಿಸಿಕೊಂಡರು.

ನಿಶೇಷ್ ಬಸವರೆಡ್ಡಿ ಆಂಧ್ರ ಪ್ರದೇಶದ ನೆಲ್ಲೂರಿನ ತಂದೆ–ತಾಯಿಯ ಮಗ. 1999ರಲ್ಲಿ ಸ್ಯಾನ್‌ಫ್ರಾನ್ಸಿಸ್ಕೊಗೆ ಮುರಳೀಕೃಷ್ಣ ಬಸವರೆಡ್ಡಿ ಹಾಗೂ ಸಾಯಿ ಪ್ರಸನ್ನ ವಲಸೆ ಹೋದರು. ಆನಂತರ ದಕ್ಷಿಣ ಕ್ಯಾಲಿಫೋರ್ನಿಯಾಗೆ ಸ್ಥಳಾಂತರಗೊಂಡರು. ಅಲ್ಲಿನ ನ್ಯೂಪೋರ್ಟ್ ಬೀಚ್‌ನಲ್ಲಿ ನಿಶೇಷ್ 2005ರಲ್ಲಿ ಹುಟ್ಟಿದ್ದು. ಆತನಿಗೆ ನಿಶಾಂತ್ ಬಸವರೆಡ್ಡಿ ಎಂಬ ಅಣ್ಣ ಇದ್ದಾನೆ. ಅವನೂ ಟೆನಿಸ್ ಆಟಗಾರನೇ ಹೌದು. ಇಂಡಿಯಾನಾ ವಿಶ್ವವಿದ್ಯಾಲಯದಲ್ಲಿ ಕಲಿಯುವಾಗ ಸಿಂಗಲ್ಸ್ ಟೂರ್ನಿಯಲ್ಲಿ ಆರು ಬಾರಿ ನಿಶಾಂತ್ ಗೆಲುವು ಸಾಧಿಸಿದ್ದ. ಎರಡು ಸಲ ಡಬಲ್ಸ್‌ನಲ್ಲೂ ಗೆದ್ದಿದ್ದ.

ಇಂಡಿಯಾನಾದ ಕ್ಯಾರ್ಮಲ್‌ಗೆ ಕುಟುಂಬವು ಸ್ಥಳಾಂತರಗೊಂಡಾಗ ನಿಶೇಷ್‌ಗೆ ಎಂಟು ವರ್ಷ. ಜಪಾನಿನ ಕಾರು ಕಂಪನಿ ಟೊಯೊಟಾದಲ್ಲಿ ಅವರ ತಂದೆ ಕೆಲಸ ಮಾಡುತ್ತಿದ್ದರು. ಖುಷಿಗಾಗಿ ಅವರೂ ಟೆನಿಸ್ ಆಡುತ್ತಿದ್ದರು. ಅವರನ್ನು ನೋಡಿಯೇ ಮಕ್ಕಳಿಗೂ ಆ ಆಟದಲ್ಲಿ ಒಲವು ಮೂಡಿತೆನ್ನಿ.